
ಸೌಲಭ್ಯಗಳು ಇಲ್ಲದಾಗುವವೋ ಆಗ ಮಾನವಕುಲಕ್ಕೆ ಹೆಚ್ಚು ಬೆಳಕು, ಪ್ರಗತಿ ಉಂಟಾಗುತ್ತದೆ.'' *(The Complete Works of Swami Vivekananda, Vol.1, p.423).*

ಮಾನವ ನಿಜವಾದ ಮಾನವನಾಗಿ ಉಳಿಯಬೇಕಾದರೆ, ಬೆಳೆಯಬೇಕಾದರೆ ಅವನಿಗೆ ಸರಿಯಾದ ಶಿಕ್ಷಣದ ಅಗತ್ಯವಿದೆ. ಅದು ಅವನೊಬ್ಬನಿಂದಲೇ ಪೂರ್ಣಗೊಳ್ಳುವುದಿಲ್ಲ, ಅದಕ್ಕೆ ಸರಿಯಾದ ಗುರುವಿನ ಮಾರ್ಗದರ್ಶನವೂ ಬೇಕಾಗುತ್ತದೆ. ಇದಕ್ಕೆ ಸ್ವಾಮಿ ವಿವೇಕಾನಂದರ ವಿದ್ಯಾಭ್ಯಾಸದ ಕಲ್ಪನೆ ಅಳವಡಿಕೆಯಾಗುವುದು ಅಗತ್ಯ. ಅವರ ಕಲ್ಪನೆಯಲ್ಲಿ ನಿಜವಾದ ವಿದ್ಯಾಭ್ಯಾಸ ಬೇರೆ. ಅದು ಮಾನವಕುಲಕ್ಕೆ ಒಳಿತಾಗುವ ಸರ್ವಸ್ವವನ್ನೂ ಒಳಗೊಂಡದ್ದು. ''ವಿದ್ಯಾಭ್ಯಾಸವೆಂದರೆ ನಿಮ್ಮ ಮೆದುಳಿಗೆ ಗಿಡಿಯಲ್ಪಟ್ಟು ಅಲ್ಲಿ ಜೀವನವಿಡೀ ಜೀರ್ಣವಾಗದೆ ಕೊಳೆಯುತ್ತಿರುವ ಮಾಹಿತಿಗಳ ಗಾತ್ರವಲ್ಲ, ನಮ್ಮ ಬದುಕನ್ನು ಕಟ್ಟುವ, ನಮ್ಮನ್ನು ಮನುಷ್ಯರನ್ನಾಗಿಸುವ, ಶೀಲವಂತಿಕೆಯನ್ನೀಯುವ, ರಕ್ತಗತವಾಗಿ ನಮ್ಮಲ್ಲಿ ಒಂದಾಗಿ ಸೇರಿಹೋಗಬಹುದಾದ ಪರಿಕಲ್ಪನೆಗಳು ಬೇಕು. ನಿಮ್ಮ ಕೈಬೆರಳೆಣಿಕೆ ಯಷ್ಟು ಪರಿಕಲ್ಪನೆಗಳನ್ನು ಜೀರ್ಣಿಸಿಕೊಂಡು ನಿಮ್ಮ ಬದುಕಿನ, ಶೀಲದ ಭಾಗವನ್ನಾಗಿ ಮಾಡಿಕೊಂಡಿರೋ, ನಿಮ್ಮ ಆ ವಿದ್ಯಾಭ್ಯಾಸವು ಒಂದು ಇಡೀ ಪುಸ್ತಕ ಭಂಡಾರವನ್ನೇ ಬಾಯಿಪಾಠ ಮಾಡಿಕೊಂಡಿರುವವನದಕ್ಕಿಂತ ಹೆಚ್ಚು.''

ಸ್ವಾಮಿ ವಿವೇಕಾನಂದರ ಈ ವಿದ್ಯಾಭ್ಯಾಸದ ಕಲ್ಪನೆ ಆಧುನಿಕ ಶಿಕ್ಷಣ ಕ್ರಮದಲ್ಲಿ ಬೆರೆಯದ ಹೊರತು, ಅದಕ್ಕೆ ತಕ್ಕ ಮಾರ್ಗದರ್ಶನ ನೀಡುವ ಗುರು ದೊರೆಯದ ಹೊರತು ಅದು ಪೂರ್ಣಗೊಂಡಂತಾಗುವುದಿಲ್ಲ. ವಿವೇಕಾನಂದರು ಹೇಳುವಂತೆ: ''ನಮಗಿಂದು ಬೇಕಾಗಿರುವುದು ಮಾನವ ನಿರ್ಮಾಣದ ಧರ್ಮ, ಮಾನವ ನಿರ್ಮಾಣದ ಸಿದ್ಧಾಂತಗಳು ಹಾಗೂ ಎಲ್ಲೆಡೆಯೂ ಮಾನವ ನಿರ್ಮಾಣದ ವಿದ್ಯಾಭ್ಯಾಸ.'' ಇದಕ್ಕೆ ಆದರ್ಶ ಗುರು ಬೇಕು, ಆಧುನಿಕ ಶಿಕ್ಷಣ ಕ್ರಮದಲ್ಲಿ ಅದಕ್ಕೆ ತಕ್ಕ ಮಾರ್ಪಾಡುಗಳು ಬೇಕು. ✷

# ಯುವಚೇತನ



**ನ**ಮ್ಮ ಏಕಮಾತ್ರ ಸಮಾನ ಭೂಮಿಕೆಯೆಂದರೆ ಹಿಂದಿನಿಂದ ಬಂದ ಪವಿತ್ರ ಪರಂಪರೆ ಮತ್ತು ಧರ್ಮ. ಅದೊಂದೇ ಏಕಮಾತ್ರ ಸಾಧಾರಣ ಭೂಮಿ. ಅದರ ಮೇಲೆ ಮಾತ್ರ ನಮ್ಮ ರಾಷ್ಟ್ರವನ್ನು ನಿರ್ಮಿಸುವುದು ಸಾಧ್ಯ. ಯೂರೋಪಿನಲ್ಲಿ ರಾಜನೀತಿಯ ಭಾವನೆ ಜನಾಂಗದ ಏಕತೆಗೆ ಕಾರಣ. ಏಷ್ಯಾಖಂಡದಲ್ಲಿ ಧಾರ್ಮಿಕ ಆದರ್ಶಗಳು ಜನಾಂಗದ ಏಕತೆಗೆ ಮೂಲ. ಭವಿಷ್ಯದ ಭಾರತದ ಸಂಘಟನೆಗೆ ಧಾರ್ಮಿಕ ಏಕತೆ ಮೊದಲನೆಯ ಆವಶ್ಯಕತೆ. ಭರತಖಂಡದ ಆದ್ಯಂತವು ಒಂದು ಧರ್ಮವನ್ನೊಪ್ಪಿಕೊಳ್ಳಬೇಕು. ಒಂದು ಧರ್ಮವೆಂದರೆ ಏನು? ಕ್ರೈಸ್ತರು, ಮಹಮ್ಮದೀಯರು, ಬೌದ್ಧರು ತಿಳಿದುಕೊಂಡಿರುವಂತಹ ಒಂದು ಧರ್ಮವಲ್ಲ. ನಮ್ಮ ವಿಭಿನ್ನ ಸಂಪ್ರದಾಯಗಳಲ್ಲಿ, ಅವರವರ ಸಿದ್ಧಾಂತಗಳು ಪರಸ್ಪರ ಎಷ್ಟೇ ವಿರುದ್ಧವಾಗಿರಲಿ, ಅವುಗಳಲ್ಲೆಲ್ಲಾ ಒಂದು ಸರ್ವಸಾಮಾನ್ಯ ತಳಹದಿ ಇದೆ. ಈ ಧರ್ಮಗಳಲ್ಲಿ ಕೆಲವು ಸಾಮಾನ್ಯ ಭೂಮಿಕೆಗಳು ಇವೆ. ಅವುಗಳ ಪರಿಧಿಯಲ್ಲಿ ಈ ನಮ್ಮ ಧರ್ಮವು ಅನಂತ ವೈವಿಧ್ಯವನ್ನು ಒಪ್ಪಿಕೊಳ್ಳುತ್ತದೆ. ಅನಂತವಾದ ಆಲೋಚನಾ ಸ್ವಾತಂತ್ರ್ಯವನ್ನೂ ತಮ್ಮದೇ ರೀತಿಯಲ್ಲಿ ಜನರು ಬಾಳುವ ಅವಕಾಶವನ್ನೂ ಅದು ಒಪ್ಪಿಕೊಳ್ಳುತ್ತದೆ. ನಮಗೆಲ್ಲಾ ಇದು ಗೊತ್ತಿದೆ. ನಮ್ಮಲ್ಲಿ ಯಾರು ಸ್ವಲ್ಪ ಆಲೋಚನೆ ಮಾಡಬಲ್ಲರೋ ಅವರಿಗಾದರೂ ಇದು ಗೊತ್ತಿದೆ. ಪ್ರಾಣಶಕ್ತಿಯನ್ನು ನೀಡುವ ನಮ್ಮ ಧರ್ಮದ ಈ ಸರ್ವಸಾಮಾನ್ಯ ತತ್ತ್ವಗಳನ್ನು ಎಲ್ಲರಿಗೂ ಪ್ರಚಾರ ಮಾಡಬೇಕಾಗಿದೆ. ಈ ದೇಶದಲ್ಲಿರುವ ಸ್ತ್ರೀ, ಪುರುಷ, ಮಕ್ಕಳೆಲ್ಲರೂ ಇದನ್ನು ತಿಳಿದುಕೊಳ್ಳಲಿ, ತಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರಲಿ. ಇದೇ ನಮ್ಮ ಪ್ರಥಮ ಕರ್ತವ್ಯ. ಆದುದರಿಂದ ಇದನ್ನು ನಾವು ಸಾಧಿಸಬೇಕು.

* * *

**''ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ**
**ಜಾನತಾಮ್! ದೇವಾ ಭಾಗಂ ಯಥಾ ಪೂರ್ವೇ''**

''ನೀವೆಲ್ಲ ಒಂದು ಮನಸ್ಸಿನವರಾಗಿ, ಒಂದು ಭಾವನೆಯವರಾಗಿ, ಪ್ರಾಚೀನ ಕಾಲದಲ್ಲಿ ಒಮ್ಮತದವರಾದುದರಿಂದ ದೇವತೆಗಳಿಗೆ ಬಲಿಯನ್ನು ಸ್ವೀಕರಿಸಲು ಸಾಧ್ಯವಾಯಿತು.'' ಮನುಷ್ಯರೂ ಏಕಮತದವರಾಗಿರುವುದರಿಂದಲೇ ದೇವತೆಗಳನ್ನು ಪೂಜಿಸಲು ಸಾಧ್ಯವಾಯಿತು. ಒಮ್ಮತವೇ ಸಮಾಜಶಕ್ತಿಯ ರಹಸ್ಯ. ದ್ರಾವಿಡ, ಆರ್ಯ, ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಪ್ರಶ್ನೆಯ ಮೇಲೆ ನೀವು ಹೋರಾಡಿದಷ್ಟೂ ಭವಿಷ್ಯ ಭಾರತ ನಿರ್ಮಾಣಕ್ಕೆ, ಮಾಡಬೇಕಾದ ಶಕ್ತಿ ಸಂಗ್ರಹಕ್ಕೆ ದೂರವಾಗುವೆವು. ಇದನ್ನು ಗಮನದಲ್ಲಿಡಿ. ಭವಿಷ್ಯ ಭಾರತ ಸಂಪೂರ್ಣವಾಗಿ ಇದರ ಮೇಲೆ ನಿಂತಿದೆ. ಈ ಇಚ್ಛಾಶಕ್ತಿಯನ್ನು ಸಂಗ್ರಹಿಸುವುದು, ಅದನ್ನು ಏಕೀಭೂತ ಮಾಡುವುದು, ಶತಮುಖವಾಗಿ ಹರಿಯುತ್ತಿರುವುದನ್ನು ಏಕಮುಖವಾಗಿ ಮಾಡುವುದು, ಇದೇ ರಹಸ್ಯ. *(**'ಭಾರತದ ಭವಿಷ್ಯ'** ಉಪನ್ಯಾಸದಿಂದ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೧೬೦-೬೧ ಮತ್ತು ೧೭೧)*

**ಸ್ವಾಮಿ ನಿತ್ಯಸ್ಥಾನಂದ**

# ಕ್ಷೇತ್ರ ಮತ್ತು ಕ್ಷೇತ್ರಜ್ಞ




ಸಾಮಾನ್ಯವಾಗಿ ನಮ್ಮ ಗಮನವೆಲ್ಲ ಹೊರಮುಖವಾಗಿರುತ್ತದೆ. ಹೊರಜಗತ್ತು ನಮಗೆ ಅತ್ಯಂತ ಸತ್ಯವಾಗಿ ಕಂಡುಬರುತ್ತದೆ. ನಮ್ಮ ಗಮನವನ್ನು ನಮ್ಮೆಡೆಗೇ ಹರಿಸಲು ಪ್ರಾರಂಭಿಸಿದಾಗ ಆಧ್ಯಾತ್ಮಿಕ ಜೀವನ ಪ್ರಾರಂಭವಾಗುತ್ತದೆ. ಆಗ ಪ್ರಧಾನವಾಗಿ ನಮ್ಮ ಅರಿವಿಗೆ ಬರುವುದು ದೇಹೇಂದ್ರಿಯಗಳು. ಸ್ವಲ್ಪ ಒಳಕ್ಕೆ ಹೋದಾಗ ವಿವಿಧ ಮಾನಸಿಕ ವೃತ್ತಿಗಳು ನಮ್ಮ ಗಮನಕ್ಕೆ ಬರುತ್ತವೆ. ಇನ್ನೂ ಒಳಕ್ಕೆ ಹೋದಾಗ ಜೀವಾತ್ಮನ ಅರಿವು ಉಂಟಾಗುತ್ತದೆ. ಮೊದಲು ಹೊರ ಜಗತ್ತಿನ ವಸ್ತುಗಳು ನಮ್ಮ ಅರಿವಿನ ವಿಷಯವಾಗಿರುತ್ತವೆ; ಮುಂದೆ ಸ್ಥೂಲದೇಹವು ನಮ್ಮ ಅರಿವಿನ ವಿಷಯವಾಗಿರುತ್ತವೆ. ಮುಂದೆ, ಇನ್ನೂ ಹಿಂದೆ ಹೋದಾಗ ಮಾನಸಿಕ ವೃತ್ತಿಗಳೇ ಅರಿವಿನ ವಿಷಯ ವಾಗಿರುತ್ತವೆ. ಆದರೆ ಆ ಅರಿವು ಅರಿವಾಗಿಯೇ ಉಳಿಯುತ್ತದೆ, ವಿಷಯವಾಗುವುದಿಲ್ಲ. 'ದೃಗ್‌ದೃಶ್ಯ ವಿವೇಕ'ದ ಮೊದಲನೆಯ ಮಂತ್ರವು ಇದನ್ನು ಸ್ಪಷ್ಟಪಡಿಸುತ್ತದೆ:

**ರೂಪಂ ದೃಶ್ಯಂ ಲೋಚನಂ ದೃಶ್ಯಂ ತದ್ದೃಶ್ಯಂ ದೃಕ್ತು ಮಾನಸಮ್।**
**ದೃಶ್ಯಾ ಧೀವೃತ್ತಯಃ ಸಾಕ್ಷೀ ದೃಗೇವ ನ ತು ದೃಶ್ಯತೇ ॥**

'ಹೊರಗಿನ ರೂಪಗಳು ವಿಷಯ, ಅವನ್ನು ನೋಡುವ ಕಣ್ಣು ವಿಷಯಿ. ಕಣ್ಣು ಮನಸ್ಸಿಗೆ ವಿಷಯವಾಗಿ, ಮನಸ್ಸು ವಿಷಯಿ ಆಗು ತ್ತದೆ. ಮನಸ್ಸಿನ ವೃತ್ತಿಗಳು ಸಾಕ್ಷೀಚೈತನ್ಯಕ್ಕೆ ವಿಷಯವಾಗುತ್ತವೆ. ಆದರೆ ಸಾಕ್ಷಿಯು ವಿಷಯಿಯಾಗಿಯೇ ಇರುತ್ತಾನೆ, ವಿಷಯ ವಾಗುವುದಿಲ್ಲ.'

*ರೂಪ ವಿವಿಧವಾದರೂ ಕಣ್ಣು ಒಂದೇ ಆಗಿರುವುದರಿಂದ ಎಲ್ಲ ವನ್ನೂ ನೋಡುತ್ತದೆ, ಕಣ್ಣಿನಲ್ಲಿ ವೈವಿಧ್ಯವಿದ್ದರೂ ಏಕವಾದ ಮನಸ್ಸು ಅದನ್ನೆಲ್ಲ ನೋಡುತ್ತದೆ. ಹಾಗೆಯೇ ವೈವಿಧ್ಯಮಯ ಧೀವೃತ್ತಿ ಗಳನ್ನು ಏಕವಾದ ಪ್ರಜ್ಞೆ ನೋಡುತ್ತದೆ.*

ಈ ರೀತಿಯ ವಿಷಯ–ವಿಷಯಿ ವಿವೇಕವೇ ಭಗವದ್ಗೀತೆಯ ಹದಿಮೂರನೇ ಅಧ್ಯಾಯದ ಮುಖ್ಯ ವಿಷಯವಾಗಿದೆ – ಅಂದರೆ ವಿಷಯಿಯನ್ನು, ಅಂದರೆ ಆತ್ಮನನ್ನು ವಿಷಯವರ್ಗದಿಂದ ಪ್ರತ್ಯೇ ಕಿಸಿ ಅರಿಯುವುದು. ದೇಹೇಂದ್ರಿಯ ಮನಸ್ಸುಗಳಿಂದ ಕೂಡಿದ ಈ ವ್ಯಕ್ತಿತ್ವವೇ ವಿಷಯ, ಅದನ್ನು ಇಲ್ಲಿ **ಕ್ಷೇತ್ರ** ಎಂದು ಕರೆಯಲಾಗಿದೆ. ಇದನ್ನು ಸಾಕ್ಷಿಯಂತೆ ಅರಿಯುವವನು **ಕ್ಷೇತ್ರಜ್ಞ** ಅಥವಾ ಆತ್ಮಾ. ಕ್ಷೇತ್ರವು ವೈವಿಧ್ಯಮಯ, ಇದನ್ನು ಅರಿಯುವ ಆತ್ಮನು ಏಕೈಕ ನಾಗಿರಬೇಕು. ಅವನಿಂದಾಗಿಯೇ ಈ ವ್ಯಕ್ತಿತ್ವಕ್ಕೆ ಒಂದು ಐಕ್ಯತೆ ಬಂದಿರುವುದು. ಶರೀರ ಮನಸ್ಸುಗಳೆಲ್ಲವೂ ಜಡವಾಗಿರುವುದು, ಹಾಗೂ ಒಂದು ಜಡವು ಮತ್ತೊಂದು ಜಡವನ್ನು ಅರಿಯಲಾರದು. ಅರಿಯುವ ಅಂಶ ಚೈತನ್ಯಕ್ಕೆ ಸೇರಿದುದು. ಆದ್ದರಿಂದ ಅಂತರಾತ್ಮನೇ ವಿಷಯ ಗಳನ್ನೂ ಅರಿಯುವವನು. ಅವನು ಬುದ್ಧಿಯೊಡನೆ ಸೇರಿ ದಾಗ ದ್ರಷ್ಟ್ರುವಾಗುತ್ತಾನೆ.

ಮುಂಜ ಎಂಬ ಹುಲ್ಲಿನ ಮೃದುವಾದ ಗರ್ಭಭಾಗವನ್ನು ಹೊರ ಪದರದಿಂದ ಬಿಡಿಸಿ ತೆಗೆಯುವಂತೆ ಶರೀರತ್ರಯದಿಂದ ಆತ್ಮನನ್ನು ಬೇರ್ಪಡಿಸಬೇಕು ಎಂದು ಕಠೋಪನಿಷತ್ತು ಹೇಳುತ್ತದೆ. ಶ್ರೀ ವಿದ್ಯಾ ರಣ್ಯರು 'ಪಂಚದಶೀ'ಯಲ್ಲಿ ಇದೇ ವಿಷಯವನ್ನು ಇನ್ನೊಂದು ವಿಚಾರಧಾರೆಯ ಮೂಲಕ ವಿವರಿಸುತ್ತಾರೆ: ನಾವು ಜಾಗ್ರತಾವಸ್ಥೆ ಯಿಂದ ಸ್ವಪ್ನಾವಸ್ಥೆಗೆ ಹೋದಾಗ ಸ್ಥೂಲದೇಹದೊಡನೆ ತಾದಾತ್ಮ್ಯ ವಿರುವುದಿಲ್ಲ; ಸ್ಥೂಲದೇಹವನ್ನು ಮರೆತೇಬಿಡುತ್ತೇವೆ. ಆದರೆ ಕನಸಿ ನಲ್ಲಿ ದೃಶ್ಯಗಳನ್ನು ನೋಡುತ್ತಾ ನಾವಿರುತ್ತೇವೆ. ಇದರಿಂದ ನಾವು ಸ್ಥೂಲದೇಹವಲ್ಲ ಎಂಬುದು ತಿಳಿದುಬರುತ್ತದೆ. ಹಾಗೆಯೇ ಸುಷು ಪ್ತಿಯ ಅವಸ್ಥೆಗೆ ಹೋದಾಗ ಮನಸ್ಸೂ ಇರುವುದಿಲ್ಲ, ಆದರೆ ನಾವಿರು ತ್ತೇವೆ. ಇದರಿಂದ ನಾವು ಮನಸ್ಸಿನಿಂದಲೂ ಬೇರೆ ಎಂಬುದು ತಿಳಿದು ಬರುತ್ತದೆ. ಮುಂದೆ ತುರೀಯಾವಸ್ಥೆಯನ್ನು ತಲುಪಿದಾಗ ಕಾರಣ ಶರೀರವೂ ಉಳಿಯದೆ ಆತ್ಮನೊಬ್ಬನೇ ಉಳಿಯುತ್ತಾನೆ. ಇದನ್ನೇ **ಕ್ಷೇತ್ರ ಮತ್ತು ಕ್ಷೇತ್ರಜ್ಞ ವಿವೇಕ** ಎಂದು ಕರೆಯುವುದು.

ಸಂಸಾರವೆಂಬ ಬೆಳೆಯನ್ನು ಬೆಳೆಸುವುದಕ್ಕೆ ಈ ದೇಹವು ಹೊಲ ವಾಗಿರುವುದರಿಂದ ಇದನ್ನು ಕ್ಷೇತ್ರವೆಂದು ಕರೆಯಲಾಗಿದೆ, ಎಂದು ಶ್ರೀಧರಸ್ವಾಮಿಗಳು ವಿವರಿಸುತ್ತಾರೆ. ಶ್ರೀಶಂಕರಾಚಾರ್ಯರು ಇದಕ್ಕೆ ಇನ್ನೂ ವಿಶೇಷ ಅರ್ಥಗಳನ್ನು ನೀಡುತ್ತಾರೆ: **ಕ್ಷತತ್ರಾಣಾತ್ ಕ್ಷಯಾತ್ ಕ್ಷರಣಾತ್ ಕ್ಷೇತ್ರವತ್ ವಾ ಅಸ್ಮಿನ್ ಕರ್ಮಫಲನಿವೃತ್ತೇಃ ಕ್ಷೇತ್ರಂ ಇತಿ** – 'ಶರೀರವನ್ನು ಗಾಯಾದಿಗಳಿಂದ ರಕ್ಷಿಸಬಹುದು, ಅದು ಕ್ಷೀಣಿಸುತ್ತದೆ, ಅದು ಬದಲಾಗುತ್ತದೆ ಮತ್ತು ಅದು ಕರ್ಮ ಫಲವನ್ನು ಪಡೆಯಲು ಹೊಲದಂತಿದೆ, ಆದ್ದರಿಂದ ಅದು ಕ್ಷೇತ್ರ.'

ಈ ಶರೀರವು ಸಂಸಾರಕ್ಕೆ ಕಾರಣವಾಗಿದ್ದರೂ ಇದರ ಮೂಲ ಕವೇ ನಾವು ಸಂಸಾರಸಾಗರವನ್ನು ದಾಟಿಹೋಗಬೇಕಾಗಿದೆ. ಈ ಮಾನವ ದೇಹವೆಂಬುದು ಒಂದು ನೌಕೆಯಿದ್ದಂತೆ, ಇದನ್ನು ಅನೇಕ ಜನ್ಮಗಳ ಪುಣ್ಯಫಲವನ್ನು ತೆತ್ತು ಈ ದುಃಖಸಾಗರವನ್ನು ದಾಟಿ ಹೋಗಲು ಕೊಂಡುಕೊಂಡಿದ್ದೇವೆ, ಹಾಗೂ ಇದು ಮುರಿದು ಹೋಗುವುದಕ್ಕೆ ಮುಂಚೆಯೇ ಇದನ್ನು ದಾಟಿಬಿಡಬೇಕು – ಎಂದು

ಭಾಗವತವು ಹೇಳುತ್ತದೆ. (**ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ। ಪಾರಂ ದುಃಖೋದಧೇಃ ಗಂತುಂ ತರ ಯಾವನ್ನ ಭಿದ್ಯತೇ।)** ಆದ್ದರಿಂದಲೇ ವಚನಕಾರರು ಹೇಳುತ್ತಾರೆ: 'ಶರೀರ ವೆಂತೆಂಬ ಹೊಲವ ಹಸನು ಮಾಡಿ, ಪರತತ್ತ್ವಬೆಳೆಯನ್ನು ಬೆಳೆ ದುಣ್ಣಿರೋ.' ಸಂಸಾರವೆಂಬ ಕಳೆ ಬೆಳೆಯುವ ಕ್ಷೇತ್ರದಲ್ಲಿಯೇ ಪರ ತತ್ತ್ವವೆಂಬ ಬೆಳೆಯನ್ನೂ ಬೆಳೆಸಬಹುದು.

ದೇಹವನ್ನು ಕ್ಷೇತ್ರಕ್ಕೆ ಹೋಲಿಸಿರುವುದು ತುಂಬ ಔಚಿತ್ಯಪೂರ್ಣ ವಾಗಿದೆ. ಈ ಕ್ಷೇತ್ರದಲ್ಲಿ ಕಳೆಯನ್ನೂ ಬೆಳೆಸಬಹುದು, ಬೆಳೆಯನ್ನೂ ಬೆಳೆಸಬಹುದು. ಕಳೆಯನ್ನು ಬೆಳೆಸುವುದಕ್ಕೆ ಏನೂ ಪ್ರಯತ್ನಪಡ ಬೇಕಾಗಿಲ್ಲ, ಸುಮ್ಮನೆ ಸೋಮಾರಿಯಾಗಿಯೇ ಕಾಲ ಕಳೆದರಾ ಯಿತು. ಅನೇಕರ ಜೀವನ ಹೀಗೆಯೇ ನಿರರ್ಥಕವಾಗಿ ಕಳೆದು ಹೋಗುತ್ತದೆ. ಮತ್ತನೇಕರು ಕಾಡನ್ನು ಬೆಳೆಸಿ ಅನೇಕ ಹಿಂಸ್ರ ಪಶು ಗಳಿಗೆ ತಾಣವಾಗುತ್ತಾರೆ, ಹಾಗೆಯೇ ಅವರ ವ್ಯಕ್ತಿತ್ವವೂ ಕಾಡಿನಂತೆ ಜಟಿಲವಾಗುತ್ತದೆ. ಉತ್ತಮ ಬೆಳೆಯನ್ನು ಬೆಳೆಸಲು ತುಂಬ ಪ್ರಯತ್ನಪಡಬೇಕು, ಬಹಳಷ್ಟು ಸಾಧನೆಯ ಆವಶ್ಯಕತೆ ಇದೆ. ಅನೇ ಕರು ಪ್ರಯಾಸದಿಂದ ಪ್ರಾಪಂಚಿಕ ಯಶಸ್ಸೆಂಬ ಬೆಳೆಯನ್ನು ಬೆಳೆಸು ತ್ತಾರೆ. ಇನ್ನು ಕೆಲವರು ಸದ್ಗುಣಗಳ ಹೂದೋಟವನ್ನೂ ಬೆಳೆಸಿ ಆಕ ರ್ಷಕ ವ್ಯಕ್ತಿಗಳಾಗುತ್ತಾರೆ. ಮತ್ತೆ ಕೆಲವರು ಉತ್ತಮ ಹಣ್ಣಿನ ಗಿಡ ಗಳನ್ನು ಬೆಳೆಸಿ ಲೋಕಹಿತ ಕಾರ್ಯಗಳನ್ನು ನಡೆಸುತ್ತಾರೆ. ಎಲ್ಲೋ ಕೆಲವರು ಮಾತ್ರ ನಿವೃತ್ತಿಮಾರ್ಗವನ್ನು ಅನುಸರಿಸಿ ಈ ಕ್ಷೇತ್ರದ ಹಿಂದಿರುವ ಕ್ಷೇತ್ರಜ್ಞನನ್ನು ಅರಿಯಲು ಪ್ರಯತ್ನಿಸುತ್ತಾರೆ.

ಈ ಭೂಮಿಯಲ್ಲಿ ಸಾರವಸ್ತುವಿದೆ, ಅದೇ ಎಲ್ಲ ಬಗೆಯ ಮರ ಗಿಡಗಳಿಗೆ ಪುಷ್ಟಿಯನ್ನು ಒದಗಿಸುತ್ತದೆ. ಯಾವುದೇ ಆಗಲಿ, ಕಳೆ ಯಾಗಲಿ ಬೆಳೆಯಾಗಲಿ, ಅದಕ್ಕೆ ಪುಷ್ಟಿ ದೊರೆಯುವುದು ಈ ಸಾರ ವಸ್ತುವಿನಿಂದಲೇ. ಹಾಗೆಯೇ ಈ ಶರೀರದ ಹಿಂದೆ ಒಂದು ಸಾರ ವಸ್ತುವಿದೆ, ಅದೇ ನಮ್ಮ ಅಂತರಂಗದ ದಿವ್ಯತೆ, ಆತ್ಮತತ್ತ್ವ, ಅಥವಾ ಕ್ಷೇತ್ರಜ್ಞ. ಅದೇ ಇಷ್ಟಾನಿಷ್ಟಗಳೆರಡಕ್ಕೂ, ಒಳಿತುಕೆಡಕುಗಳೆರಡಕ್ಕೂ ಶಕ್ತಿಯನ್ನು ನೀಡುತ್ತಿರುವುದು; ಅದೇ ಅಜ್ಞಾನ, ಸುಜ್ಞಾನ, ದುರ್ಜ್ಞಾನಗಳೆಲ್ಲವನ್ನೂ ಬೆಳಗುತ್ತಿರುವುದು. ಶ್ರೀರಾಮಕೃಷ್ಣರು ಹೇಳುವಂತೆ, ಒಂದೇ ಬೆಳಕಿನ ಅಡಿ ಒಬ್ಬನು ಭಾಗವತ ಓದುತ್ತಾನೆ, ಮತ್ತೊಬ್ಬನು ಫೋರ್ಜರಿ ಮಾಡುತ್ತಾನೆ, ಇಲ್ಲಿ ಬೆಳಕು ನಿರಪೇಕ್ಷ.

ಈ ಕ್ಷೇತ್ರಜ್ಞನೇ ನಾನು ಎಂದು ಶ್ರೀಕೃಷ್ಣನು ಹೇಳುತ್ತಾನೆ. ಅಂದರೆ ಆ ಪರಬ್ರಹ್ಮ ವಸ್ತುವೇ ಎಲ್ಲ ಜೀವಿಗಳಲ್ಲಿ ಆತ್ಮರೂಪದಲ್ಲಿ ನೆಲೆಸಿರುವುದು, ಇದನ್ನೇ ಸ್ವಾಮಿ ವಿವೇಕಾನಂದರು 'ಸುಪ್ತದಿವ್ಯತೆ' ಎಂದು ಕರೆದಿರುವುದು. ಇದೇ ವಿವಿಧ ಜ್ಞಾನರೂಪದಲ್ಲಿ, ಕ್ರಿಯಾ ರೂಪದಲ್ಲಿ ಮತ್ತು ಅನುಭವರೂಪದಲ್ಲಿ ವ್ಯಕ್ತವಾಗುತ್ತಿರುವುದು. ಕೇನೋಪನಿಷತ್ತಿನ ಮೊದಲನೆಯ ಮತ್ತು ಎರಡನೆಯ ಮಂತ್ರ ಗಳಲ್ಲಿ ಈ ಭಾವನೆಯು ತುಂಬ ಸುಂದರವಾಗಿ ವ್ಯಕ್ತವಾಗಿದೆ. ಶಿಷ್ಯನು ಪ್ರಶ್ನಿಸುತ್ತಾನೆ: ಮನಸ್ಸು, ಪ್ರಾಣ ಮತ್ತು ಇಂದ್ರಿಯಗಳನ್ನು ಅವು ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಲು ಪ್ರೇರೇಪಿಸುತ್ತಿರು ವವರು ಯಾರು? ಈ ಪ್ರಶ್ನೆಯಲ್ಲಿ, ಶಾಂಕರಭಾಷ್ಯವು ಸೂಚಿಸು ವಂತೆ, ಮೂರು ಪ್ರಶ್ನೆಗಳು ಅಡಕವಾಗಿವೆ:

೧. ಯಾರ ಸನ್ನಿಧಿ ಮಾತ್ರದಿಂದ ಮನಸ್ಸು ಪ್ರಾಣೇಂದ್ರಿಯ ಗಳು ತಮ್ಮ ತಮ್ಮ ಕೆಲಸ ಮಾಡುತ್ತಿವೆ?

೨. ಯಾರಿಗಾಗಿ ಈ ಕೆಲಸಗಳೆಲ್ಲವೂ ನಡೆಯುತ್ತಿವೆ?

೩. ಇಂದ್ರಿಯಗಳ ಮೂಲಕ ನಿಜವಾಗಿಯೂ ನೋಡು ವವನು ಯಾರು? ಮನಸ್ಸಿನ ಮೂಲಕ ಚಿಂತಿಸುವವನು ಯಾರು?

ಮುಂದಿನ ಮಂತ್ರವು ಉತ್ತರಿಸುತ್ತದೆ: ಆತ್ಮತತ್ತ್ವದಿಂದಾಗಿಯೇ ಈ ಎಲ್ಲ ಕ್ರಿಯೆಗಳು ನಡೆಯುತ್ತಿವೆ. ಇಲ್ಲಿ ಅವನ ಸನ್ನಿಧಿ ಮಾತ್ರ ಪ್ರಯೋಜನ, ಅವನು ನಿಷ್ಕ್ರಿಯ, ಯಾವುದೇ ಕ್ರಿಯೆಯಲ್ಲೂ ತೊಡಗುವುದಿಲ್ಲ. ಎಲ್ಲ ಕ್ರಿಯೆಗಳೂ ಪ್ರಕೃತಿಗೆ ಸೇರಿರುವುದು. ಗೀತೆ ಇದನ್ನು ಸ್ಪಷ್ಟಪಡಿಸುತ್ತದೆ:

**ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।**
**ಯಃ ಪಶ್ಯತಿ ತದಾತ್ಮಾನಮಕರ್ತಾರಂ ಸ ಪಶ್ಯತಿ ॥**

'ಪ್ರಕೃತಿಯೇ ಎಲ್ಲ ಕೆಲಸಗಳನ್ನೂ ಮಾಡುತ್ತಿರುವುದು. ಯಾರು ಆತ್ಮನನ್ನು ಅಕರ್ತೃ ಎಂದು ತಿಳಿಯುತ್ತಾನೊ ಅವನೇ ನಿಜವಾದ ಜ್ಞಾನಿ.'

ಶ್ರೀರಾಮಕೃಷ್ಣರು ಮೋಹಕವಾದ ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ: ಮದುವೆಯ ಉತ್ಸವ ನಡೆಯುತ್ತಿದೆ. ಮನೆಯ ಯಜಮಾನನು ಒಂದು ಕಡೆ ಸುಮ್ಮನೆ ಕುಳಿತಿರುತ್ತಾನೆ. ಯಜಮಾನಿಯು ಎಲ್ಲ ಕೆಲಸಗಳನ್ನೂ ನಿರ್ವಹಿಸುತ್ತಾಳೆ, ಮತ್ತು ಆಗಾಗ ಬಂದು ಯಜಮಾನನಿಗೆ ವರದಿ ಒಪ್ಪಿಸುತ್ತಾಳೆ. ಇಲ್ಲಿ ಯಜ ಮಾನನ ಸಾನ್ನಿಧ್ಯ ಮಾತ್ರ ಬೇಕಾಗಿರುವುದು. ಅವನು ಏನೂ ಕೆಲಸ ಮಾಡುವುದಿಲ್ಲ. (ಇದು ಹಿಂದಿನ ಕಾಲದ ಕುಟುಂಬಕ್ಕೆ ಅನ್ವಯಿಸು ವಂತಹದು, ಈಗಿನ ಕಾಲದಲ್ಲಿ ನಡೆಯುವುದಿಲ್ಲ.)

ಎರಡನೆಯ ಪ್ರಶ್ನೆ, ಯಾರಿಗಾಗಿ ಈ ಕ್ರಿಯೆಗಳೆಲ್ಲವೂ ನಡೆಯು ತ್ತಿದೆ? ಎಂಬುದು. ಸಾಂಖ್ಯದರ್ಶನದ ಒಂದು ಮುಖ್ಯ ತತ್ತ್ವವನ್ನು ಈ ಪ್ರಶ್ನೆಯು ಸೂಚಿಸುತ್ತದೆ. ಅದಾವುದೆಂದರೆ **ಸಂಘಾತಃ ಪರಾರ್ಥತ್ವಾತ್** – ಅಂದರೆ ಎಲ್ಲ ಸಂಯುಕ್ತಗಳೂ ಇತರರಿಗಾಗಿ ಇರು ವುದು. ಉದಾಹರಣೆಗೆ ಮನೆಯು ಒಂದು ಸಂಯುಕ್ತ – ಅನೇಕ ವಸ್ತುಗಳಿಂದ ಕೂಡಿ ಆಗಿದೆ. ಅದು ಇರುವುದು ತನಗಾಗಿ ಅಲ್ಲ, ಅದರಲ್ಲಿ ವಾಸಿಸುವ ವ್ಯಕ್ತಿಗಾಗಿ. ಹಾಗೆಯೇ ಈ ದೇಹೇಂದ್ರಿಯ ಮನಸ್ಸುಗಳು ಒಂದು ಸಂಯುಕ್ತ. ಅವುಗಳ ಕ್ರಿಯೆಗಳು ಯಾರಿ ಗಾಗಿ? ಕಣ್ಣು ತನಗಾಗಿ ನೋಡುವುದಿಲ್ಲ, ಕಿವಿ ತನಗಾಗಿ ಕೇಳುವು ದಿಲ್ಲ. ಹಾಗೆಯೇ ಈ ಕ್ಷೇತ್ರದಲ್ಲಿ ನಡೆಯುವ ಯಾವ ಕ್ರಿಯೆಗಳೂ

ಅದಕ್ಕಾಗಿ ಅಲ್ಲ, ಅದಕ್ಕಿಂತ ಪ್ರತ್ಯೇಕವಾದ, ಸಂಯುಕ್ತವಲ್ಲದ ಆತ್ಮನಿಗಾಗಿ, ಅಥವಾ ಕ್ಷೇತ್ರಜ್ಞನಿಗಾಗಿ. ಈ ವಿಚಾರವು ಇಪ್ಪತ್ತನೆಯ ಶ್ಲೋಕದಲ್ಲಿ ಸೂಚಿತವಾಗಿದೆ:

**ಕಾರ್ಯಕರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।**
**ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥**

'ಎಲ್ಲ ಕ್ರಿಯೆಗಳಿಗೆ ಕಾರಣವಾಗಿರುವುದು ಪ್ರಕೃತಿ ಮತ್ತು ಕ್ರಿಯಾಫಲಗಳಾದ ಸುಖದುಃಖಗಳನ್ನು ಅನುಭವಿಸುವುದಕ್ಕೆ ಪುರುಷನು ಕಾರಣ.' ಪ್ರಕೃತಿಯು ಜಡವಾಗಿರುವುದರಿಂದ ಅದಕ್ಕೆ ಕರ್ತೃತ್ವವನ್ನು ಆರೋಪಿಸುವುದಕ್ಕೆ ಆಗುವುದಿಲ್ಲ. ಕರ್ತೃತ್ವ ಭೋಕ್ತೃತ್ವಗಳೆರಡೂ ಪ್ರಕೃತಿ-ಪುರುಷ ಸಂಯೋಗದಿಂದ (ಚಿಜ್ಜಡಗ್ರಂಥಿ) ಉಂಟಾಗುತ್ತದೆ. ಈ ಚಿಜ್ಜಡಗ್ರಂಥಿಯಿಂದ ಚಿತ್ತನ್ನು ಬೇರ್ಪಡಿಸಬೇಕು. ಅದಕ್ಕಾಗಿಯೇ ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ಇವೆರಡರ ಸ್ವಭಾವವನ್ನು ವಿಂಗಡಿಸಿ ತೋರಿಸಿದ್ದಾನೆ.

ಮೂರನೆಯ ಪ್ರಶ್ನೆ: ಇಂದ್ರಿಯಗಳ ಮೂಲಕ ನಿಜವಾಗಿಯೂ ನೋಡುವವನು ಯಾರು? ಮನಸ್ಸಿನ ಮೂಲಕ ಚಿಂತಿಸುವವನು ಯಾರು? ನಿಜವಾಗಿಯೂ ನೋಡಿದರೆ ಕಣ್ಣು ಒಂದು ಕ್ಯಾಮರಾ ಇದ್ದಂತೆ, ಕ್ಯಾಮರಾ ನೋಡಲಾರದು. ಒಂದು ಜಡವಸ್ತು ಇನ್ನೊಂದು ಜಡವಸ್ತುವನ್ನು ನೋಡಲಾರದು ಅಥವಾ ಅನುಭವಿಸಲಾರದು. ನೋಡುವ, ಕೇಳುವ, ಅನುಭವಿಸುವ ಅಂಶ ಆತ್ಮನಿಗೆ ಸಂಬಂಧಿಸಿರುವುದು. ನಾವು ಒಂದು ವಸ್ತುವನ್ನು, ಉದಾಹರಣೆಗೆ ಒಂದು ಹಾರುವ ಹಕ್ಕಿಯನ್ನು ನೋಡಿದಾಗ ಅದಕ್ಕೆ ಸಂಬಂಧಿಸಿದ ಇಂದ್ರಿಯ ಸಂವೇದನೆಗಳೆಲ್ಲ ಇಂದ್ರಿಯಗಳ ಮೂಲಕ ಮಿದುಳಿಗೆ ಹೋಗಿ, ಅಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ಅವು ಮುದ್ರಿತವಾಗುತ್ತವೆ. ಹಕ್ಕಿಯ ಬಣ್ಣ ಒಂದು ಕೇಂದ್ರದಲ್ಲಿ, ಅದರ ಧ್ವನಿ ಇನ್ನೊಂದು ಕೇಂದ್ರದಲ್ಲಿ, ಅದರ ಚಲನೆ ಮತ್ತೊಂದು ಕೇಂದ್ರದಲ್ಲಿ ಇತ್ಯಾದಿ. ಇವೆಲ್ಲವೂ ಎಲ್ಲಿ ಕೂಡಿಸಲ್ಪಟ್ಟು ಹಾರುವ ಹಕ್ಕಿಯ ಒಂದು ಪೂರ್ಣ ರೂಪವನ್ನು ಪಡೆಯುತ್ತದೆ? ಮತ್ತು ಅದನ್ನು ಯಾರು ನೋಡುತ್ತಾರೆ? ಇದು ನರವಿಜ್ಞಾನದಲ್ಲಿ ಒಂದು ದೊಡ್ಡ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕೇನೋಪನಿಷತ್ತಿನಲ್ಲಿದೆ. ಮಿದುಳಿನ ಕೇಂದ್ರಗಳಲ್ಲಿ ಮುದ್ರಿತವಾದ ಇಂದ್ರಿಯಾಂಶಗಳೆಲ್ಲವೂ ಮನಸ್ಸಿನಲ್ಲಿ ಕೇಂದ್ರೀಕೃತವಾಗಿ, ಅಲ್ಲಿ ಹಾರುವ ಹಕ್ಕಿಗೆ ಸಂಬಂಧಿಸಿದ ಚಿತ್ತವೃತ್ತಿಯು ನಿರ್ಮಾಣವಾಗುತ್ತದೆ. ಅದನ್ನು ಆತ್ಮನು ತನ್ನ ಬೆಳಕಿನಿಂದಲೇ ನೋಡುತ್ತಾನೆ. ಆಗ 'ಇದು ಹಾರುವ ಹಕ್ಕಿ, ಅದನ್ನು ನಾನು ನೋಡುತ್ತಿದ್ದೇನೆ' ಎಂಬ ಅರಿವು ಉಂಟಾಗುತ್ತದೆ. ಹೀಗೆ ಎಲ್ಲ ಅನುಭವಗಳ ಹಿಂದೆ ಆತ್ಮನ ಅಸ್ತಿತ್ವವಿದೆ. ನಮ್ಮ ಸಾಮಾನ್ಯ ತಿಳಿವಳಿಕೆ ಏನೆಂದರೆ, ನಾವು ಬುದ್ಧಿ-ಮನಸ್ಸುಗಳು ಮೂಲಕ ಅರಿಯುತ್ತೇವೆ ಎಂಬುದು. ಅವುಗಳಲ್ಲಿ ಆ ಶಕ್ತಿ ಉಂಟಾಗಿರುವುದು ಆತ್ಮಚೈತನ್ಯದ ಅಸ್ತಿತ್ವದ ಮೂಲಕ. ತಪ್ತ ಅಯಃಪಿಂಡವು (ಕಾದ ಕಬ್ಬಿಣ) ಸುಡುತ್ತದೆ ಎಂದು ನಾವು ಹೇಳುತ್ತೇವೆ. ಆದರೆ ನಿಜವಾಗಿ ಸುಡುವುದು ಅಯಃಪಿಂಡವಲ್ಲ, ಅದರಲ್ಲಿರುವ ಉಷ್ಣಾಂಶ. ಹಾಗೆಯೇ ಆತ್ಮಚೈತನ್ಯದಿಂದ ಬುದ್ಧಿಮನಸ್ಸುಗಳು ಚೋದನಾತ್ಮಕವಾಗಿ ಅವು ತಮ್ಮ ಕ್ರಿಯೆಗಳನ್ನು ನೆರವೇರಿಸುತ್ತವೆ.

ನಿಜವಾಗಿ ತಿಳಿದುಕೊಳ್ಳಬೇಕಾದ ಆತ್ಮನ ಸ್ವರೂಪವನ್ನು ಶ್ರೀಕೃಷ್ಣನು ಈಗ ವಿವರಿಸುತ್ತಾನೆ. ಈ ಆತ್ಮತತ್ತ್ವವು ಸತ್ತೂ ಅಲ್ಲ, ಅಸತ್ತೂ ಅಲ್ಲ ಎಂದು ಶ್ರೀಕೃಷ್ಣನು ವಿವರಿಸುವುದು ದೊಡ್ಡ ಒಗಟಾಗಿ ಕಂಡುಬರುತ್ತದೆ. ಅದು ಅಸತ್ ಅಲ್ಲ ಎಂದರೆ ಅದಕ್ಕೆ ಅಸ್ತಿತ್ವವೇ ಇಲ್ಲವೆ? ಎಂದು ಕೇಳಿದರೆ, ಅದು ಸತ್ತೂ ಅಲ್ಲ ಎಂದು ಹೇಳುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ ಅದು **'ಸದಸದೇರ್ ಪಾರ್'**- ಅಂದರೆ ಅದು ಸತ್ ಮತ್ತು ಅಸತ್ ಎರಡನ್ನೂ ಮೀರಿದುದು. ಶ್ರೀಧರಸ್ವಾಮಿಗಳು ಈ ವಾಕ್ಯಕ್ಕೆ ಈ ಕೆಳಗಿನ ವಿವರಣೆಯನ್ನು ನೀಡುತ್ತಾರೆ: **ವಿಧಿಮುಖೇನ ಪ್ರಮಾಣಸ್ಯ ವಿಷಯಃ ಸತ್ ಶಬ್ದೇನ ಉಚ್ಯತೇ । ನಿಷೇಧಸ್ಯ ವಿಷಯಃ ತು ಅಸತ್ ಶಬ್ದೇನ ಉಚ್ಯತೇ । ಇದಂ ತು ತದುಭಯವಿಲಕ್ಷಣಂ, ಅವಿಷಯತ್ವಾತ್ ಇತ್ಯರ್ಥಃ ।** - 'ವಿಧಾಯಕ ಶಾಸ್ತ್ರವಾಕ್ಯದ ವಿಷಯವನ್ನು 'ಸತ್' ಎನ್ನಲಾಗುತ್ತದೆ. ನಿಷೇಧಿಸುವ ಶಾಸ್ತ್ರವಾಕ್ಯದ ವಿಷಯವನ್ನು 'ಅಸತ್' ಎನ್ನಲಾಗುತ್ತದೆ. ಆದರೆ ಆತ್ಮತತ್ತ್ವವು ಈ ಎರಡಕ್ಕಿಂತಲೂ ಭಿನ್ನವಾದದ್ದು - ಏಕೆಂದರೆ ಅದು ಬುದ್ಧಿಗೆ ನಿಲುಕುವಂತಹದಲ್ಲ.' ಅಂದರೆ ಆತ್ಮತತ್ತ್ವವನ್ನು 'ಇದೆ ಇದೆ' ಎಂದಾಗಲಿ, 'ಇಲ್ಲ ಇಲ್ಲ' ಎಂದಾಗಲಿ ನಿರ್ದೇಶಿಸಲಾಗುವುದಿಲ್ಲ. ಒಂದು ವಸ್ತುವನ್ನು ನಿರ್ದೇಶಿಸಿ ಸೂಚಿಸುವುದೆಂದರೆ ಅದನ್ನು ಇತರ ವಸ್ತುಗಳಿಂದ ಪ್ರತ್ಯೇಕಿಸುವುದು ಎಂದರ್ಥ. ಆತ್ಮತತ್ತ್ವವು ಏಕವಾಗಿರುವುದರಿಂದ, ಎರಡನೆಯದು ಇಲ್ಲದಿರುವುದರಿಂದ ಅದನ್ನು ಹೇಗೆ ನಿರ್ದೇಶಿಸುವುದು? ಯಾರು ನಿರ್ದೇಶಿಸುವುದು? ಪಾಲ್ ತಿಲಿಚ್ ಎಂಬ ಚಿಂತಕರು ಈ ವಿಷಯವನ್ನು ತುಂಬ ಮಾರ್ಮಿಕವಾಗಿ ಹೇಳುತ್ತಾರೆ: 'ದೇವರ ಅಸ್ತಿತ್ವದ ಪ್ರಮಾಣೀಕರಣವು ದೇವರ ಅನಸ್ತಿತ್ವದ, ಪ್ರಮಾಣೀಕರಣದಷ್ಟೇ ನಾಸ್ತಿಕತೆಯನ್ನು ಸೂಚಿಸುತ್ತದೆ.'

'ಪಂಚದಶೀ'ಯ ಒಂದು ಶ್ಲೋಕವು ಇದೇ ವಿಷಯವನ್ನು ಒತ್ತಿ ಹೇಳುತ್ತದೆ:

**ವಿಕಲ್ಪತದಭಾವಾಭ್ಯಾಮಸಂಸ್ಪೃಷ್ಟಾತ್ಮವಸ್ತುನಿ ।**
**ವಿಕಲ್ಪಿತತ್ವಲಕ್ಷತ್ವಸಂಬಂಧಾದ್ಯಾಸ್ತು ಕಲ್ಪಿತಾಃ ॥ ೧.೫೨॥**

'ವಿಕಲ್ಪದಿಂದಲೂ ವಿಕಲ್ಪದ ಅಭಾವದಿಂದಲೂ ಸೋಂಕಲ್ಪಡದ ಪರಮಾತ್ಮ ವಸ್ತುವಿನಲ್ಲಿ ವಿಕಲ್ಪತ್ವ (ಅದು ಸವಿಕಲ್ಪವೂ ನಿರ್ವಿಕಲ್ಪವೂ ಎಂಬ ವಿಕಲ್ಪ), ಲಕ್ಷ್ಯತ್ವ (ಶಾಸ್ತ್ರವಾಕ್ಯದಿಂದ ಅದು ಸೂಚಿಸಲ್ಪಡುತ್ತದೆ ಎಂಬುದು), ಸಂಬಂಧ ಇವೇ ಮೊದಲಾದವು ಕಲ್ಪಿತವಾಗಿದೆ.'

'ಎಲ್ಲೆಲ್ಲಿಯೂ ಅದರ ಕೈಕಾಲುಗಳು, ಎಲ್ಲೆಲ್ಲಿಯೂ ಅದರ ಕಣ್ಣು, ಕಿವಿ, ಮುಖಗಳು. ಅದು ಹೀಗೆ ಎಲ್ಲವನ್ನೂ ಆವರಿಸಿ